**ಓ.ಎಸ್. ನಂಃ 272/2022**

**<u>ಪಿಡಬ್ಲ್ಯೂಃ3</u>**

**ದಿನಾಂಕಃ 04.07.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಪಿ.ಡಿ ವಕೀಲರಿಂದಃ</u>**

1. ನಾನು ಕೋಳಿ ಫಾರ್ಮ ಕಂಪನಿಯಲ್ಲಿ ಸುಪರವೈಸರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ವಾದಿಯ ಸಂಬಂಧಿಕನಲ್ಲ ಆದರೆ ನಾನು ಮತ್ತು ವಾದಿ ಒಂದೇ ಊರಿನವರಾಗಿರುತ್ತೇವೆ. ವಾದಿಯ ಮನೆಯ ಎದುರುಗಡೆ ನನ್ನ ಮನೆ ಇರುತ್ತದೆ. ನಿಪಿ.1 ರ ಖರೀದಿ ಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ. ದಾವಾ ಆಸ್ತಿಯ ಖಾತೆ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಡಿ.1 ರಿಂದ 3 ರ ಫೋಟೋವನ್ನು ತೋರಿಸಿದ್ದು ಸದರಿ ಫೋಟೋಗಳಲ್ಲಿ ಇರುವ ಮನೆ ದಾವಾ ಆಸ್ತಿಯೆಂದು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಿಡಿ.1 ರಿಂದ 3 ರ ಪೋಟೋಗಳಲ್ಲಿ ಕಾಣುತ್ತಿರುವ ವ್ಯಕ್ತಿ ಪ್ರತಿವಾದಿಯಾಗಿರುತ್ತಾರೆ ಹಾಗೂ ಸದರಿ ಪೋಟೋಳಲ್ಲಿ ಇರುವ ಮಹಿಳೆ ಪ್ರತಿವಾದಿಯ ಹೆಂಡತಿಯಾಗಿರುತ್ತಾರೆ. ಸಾಕ್ಷಿಯು ಮುಂದುವರೆದು ನಿಡಿ.1 ರಿಂದ 3 ರ ಫೋಟೋಗಳು ಹಳೆಯ ಪೋಟೋಗಳು ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರೆದು ನಿಡಿ.1 ರಿಂದ 3 ರ ಪೋಟೋಗಳು 2-3 ವರ್ಷಗಳ ಹಿಂದಿನ ಪೋಟೋಗಳು ಎಂದು ಸ್ವತಃ ನುಡಿದಿರುತ್ತಾರೆ. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಿ ಸದರಿ ಪೋಟೊವು ದಾವಾ ಆಸ್ತಿಗೆ ಸೇರಿದ ಪೋಟೋವಾಗಿದ್ದು ಅದರಲ್ಲಿ ಕಾಣುತ್ತಿರುವ ವ್ಯಕ್ತಿಯು ಪ್ರತಿವಾದಿಯ ಮಗನಾಗಿರುತ್ತಾನೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ಉತ್ತರಿಸಿದ್ದು ಸದರಿ ಪೋಟೋವನ್ನು ನಿಡಿ.4 ಎಂದು ಗುರುತಿಸಲಾಯಿತು.

2. ಪ್ರತಿವಾದಿಯು ದಾವಾ ಆಸ್ತಿಯನ್ನು ಅಡಮಾನವಿಟ್ಟು ವಿಸ್ತಾರ ಫೈನಾನ್ಸನಿಂದ ಸಾಲವನ್ನು ಪಡೆದಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಇಫ್ಕೊ ಕ್ಯಾಂಪಸ್ ಎನ್ನುವ ನರ್ಸರಿ ಶಾಲೆ ನಡೆಯುತ್ತಿತ್ತು ಎಂದರೆ ಸರಿಯಲ್ಲ. ಪ್ರತಿವಾದಿ ತಮ್ಮ ಕುಟುಂಬದೊಂದಿಗೆ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ಮತ್ತು ಪ್ರತಿವಾದಿಗೂ ವೈಶಮ್ಯವಿರುವ ಕಾರಣ ನಾನು ಪ್ರತಿವಾದಿಯ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಂದಿಗೂ ಸಹ ಪ್ರತಿವಾದಿ ತನ್ನ ಕುಟುಂಬದೊಂದಿಗೆ ದಾವಾ ಆಸ್ತಿಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿ ತನ್ನ ಕುಟುಂಬ ಸಮೇತ

ಬೆಂಗಳೂರಿನಲ್ಲಿಯೇ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ವಾರಕ್ಕೆ 4 ದಿನ ವಾದಿ ದಾವಾ ಆಸ್ತಿಗೆ ಬಂದು ಹೋಗುತ್ತಾರೆ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆ :** ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಕೆ.ಆರ್.ನಗರ

**ಓ.ಎಸ್. ನಂಃ 272/2022**

**<u>ಪಿಡಬ್ಲ್ಯೂ:2</u>**

**ದಿನಾಂಕಃ 04.07.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಪಿ.ಡಿ ವಕೀಲರಿಂದಃ</u>**

1. ನಾನು ಚಾಲಕನಾಗಿ ಕೆಲಸ ಮಾಡುತ್ತೇನೆ. ವಾದಿ ನನ್ನ ಸಂಬಂಧಿಕರಲ್ಲ. ನನ್ನ ಮನೆ ದಾವಾ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿದೆ. ನನ್ನ ಮನೆಯ ಪಕ್ಕದಲ್ಲಿ 6 ಅಡಿ ಅಗಲದ ಓಣಿ ಇದೆ ಎಂದರೆ ಸರಿ. ಸದರಿ 6 ಅಡಿ ಅಗಲದ ಓಣಿಯ ಮೇಲೆ ನಾವು ನೆರಳು ಬರಲು ಶೀಟ್ ಹಾಕಿರುತ್ತೇವೆ. ನಾವು ಸದರಿ ಓಣಿಗೆ ಶೀಟ್ ಹಾಕಿದಕ್ಕಾಗಿ ಪ್ರತಿವಾದಿ ನಮ್ಮ ವಿರುದ್ದ ಪಂಚಾಯಿತಿಗೆ ದೂರನ್ನು ನೀಡಿದ್ದರು ಎಂದರೆ ಸರಿ. ನಿಪಿ.1 ರ ಖರೀದಿ ಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ. ದಾವಾ ಆಸ್ತಿಯ ಖಾತೆ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ಸಾಕ್ಷಿಗೆ ಈಗ ಎರಡು ಪೋಟೋಗಳನ್ನು ತೋರಿಸಿ ಅದರಲ್ಲಿರುವ ಮನೆ ದಾವಾ ಆಸ್ತಿಯೆಂದು ನೋಡಿ ಗುರುತಿಸಿದ್ದು ಸದರಿ ಪೋಟೋಗಳನ್ನು ನಿಡಿ.1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಇನ್ನೊಂದು ಪೊಟೋವನ್ನು ತೋರಿಸಿ ಸದರಿ ಪೋಟೊದಲ್ಲಿ ಒಳಾಂಗಣ ಕಾಣಿಸುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ಗುರುತಿಸಿದ್ದು ಸದರಿ ಪೋಟೊವನ್ನು ನಿಡಿ.3 ಎಂದು ಗುರುತಿಸಲಾಯಿತು.

2. 2019 ರವರೆಗೂ ದಾವಾ ಆಸ್ತಿಯ ಖಾತೆಯು ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾ ಆಸ್ತಿಯನ್ನು ಅಡಮಾನವಿಟ್ಟು ವಿಸ್ತಾರ ಫೈನಾನ್ಸನಿಂದ ಸಾಲವನ್ನು ಪಡೆದಿದ್ದರು ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯಲ್ಲಿ ಇಫ್ಕೊ ಕ್ಯಾಂಪಸ್ ಎನ್ನುವ ನರ್ಸರಿ ಶಾಲೆ ನಡೆಯುತ್ತಿತ್ತು ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಪ್ರತಿವಾದಿಯರು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ವಿರುದ್ದ ಪಂಚಾಯಿತಿಗೆ ದೂರನ್ನು ನೀಡಿದ ಸಿಟ್ಟಿನಿಂದ ನಾನು ವಾದಿಯೊಂದಿಗೆ ಶಾಮೀಲಾಗಿ ಪ್ರತಿವಾದಿಯ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ನ್ಯಾಯಾಲಯದಲ್ಲಿ ಬಂದು ಸಾಕ್ಷಿ ನುಡಿದ ನಂತರ ಪ್ರತಿವಾದಿ ನನ್ನ ವಿರುದ್ದ ಪಂಚಾಯಿತಿಗೆ ದೂರನ್ನು ನೀಡಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ. ನನ್ನ ಮನೆ ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ಇಲ್ಲದಿದ್ದರೂ ಸಹ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ಬಚ್ಚಲು ನೀರು ಪ್ರತಿವಾದಿಯ

ಮನೆಯ ಪಕ್ಕದಲ್ಲಿ ಹರಿದುಹೋಗುತ್ತಿದ್ದು, ಅದನ್ನು ಪ್ರತಿವಾದಿ ಬೇರೆ ಕಡೆ ಹರಿಯುವಂತೆ ಮಾಡಿದ ಕಾರಣ ಸದರಿ ಸೇಡಿನಿಂದ ನಾನು ಪ್ರತಿವಾದಿಯ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :** ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಕೆ.ಆರ್.ನಗರ